

# ಶಾಲೆ ಕಾರ್ಖಾನೆಯಾದಾಗ, ಮಗು ಉತ್ಪನ್ನವಾಗುತ್ತದೆ!



**ಶಾಲೆ ಯಾವತ್ತೂ ಕಾರ್ಖಾನೆ ಆಗಬಾರದು. ಮಗು ಉತ್ಪನ್ನವಾಗಬಾರದು. ಶಿಕ್ಷಣ ಅಂದರೆ ಕೇವಲ ಅಕ್ಷರ ಕಲಿಸುವ ವ್ಯವಸ್ಥೆಯಲ್ಲ. ಅದು ಮಗುವೊಂದು ಬಿಸಿಲು, ಮಳೆ, ನೋವು, ಆನಂದ... ಇವೆಲ್ಲದರ ನಡುವೆ ತನ್ನನ್ನು ತಾನು ಕಂಡುಕೊಳ್ಳುವ ಪ್ರಕ್ರಿಯೆ.**

■ ನರೇಂದ್ರ ರೈ ದೇರ್ಲ

ನಮ್ಮ ದೇಶದಲ್ಲಿ ಇಂದು ಎರಡು ಬಗೆಯ ಶಾಲೆಗಳಿವೆ. ಮೊದಲನೆಯದ್ದು, ಬಹುದೂರಕ್ಕೆ ಕಣ್ಣು ಕುಕ್ಕುವಷ್ಟು ಹೊಳೆಯುವ ರೂಪಕೇಂದ್ರಿತ ಸಂಸ್ಥೆಗಳು. ಇನ್ನೊಂದು, ಯಾವುದೇ ಭವ್ಯತೆ ಇಲ್ಲದ, ಆಕಾರದಲ್ಲೂ ಸ್ಪಷ್ಟತೆ ಇಲ್ಲದ ಓರೆಕೋರೆ ಸ್ಥಾವರಗಳು. ಇವು ಯಾವುದೇ ಸದ್ದುಗದ್ದಲವಿಲ್ಲದೆ ಮೌನವಾಗಿ ಅದರಷ್ಟಕ್ಕೆ ಕೆಲಸ ಮಾಡುತ್ತಾ ಇರುವ ಬುದ್ಧಿಕೇಂದ್ರಿತವು. ಮೊದಲ ಸಾಲಿನ ಶಾಲೆಗಳು ದೂರದಿಂದಲೇ ಗುರುತಾಗುತ್ತವೆ. ಭವ್ಯ ಕಟ್ಟಡ, ಗಾಜಿನ ಗೋಡೆ, ಹವಾ ನಿಯಂತ್ರಿತ ಕೊಠಡಿಗಳು, ಸಿಸಿ ಕ್ಯಾಮೆರಾಗಳ ಕಣ್ಣು, ಸ್ಯಾಟಲೈಟ್ ಲಿಂಕ್‌ನ ಜಾಣ ದೃಷ್ಟಿ, ಬಯೊಮೆಟ್ರಿಕ್‌ನ ಬೆರಳಚ್ಚು, ಸ್ಮಾರ್ಟ್ ರೂಮ್‌ನ ಪರದೆ, ಗೇಟ್ ಬಳಿ ಗರಿಗರಿ ಯುನಿಫಾರ್ಮ್ ಹಾಕಿದ ವಾಚ್‌ಮ್ಯಾನ್– ಇವೆಲ್ಲ ಸೇರಿ ಅಂಥ ಶಾಲೆಯೇ ಒಂದು ಪ್ರದರ್ಶನ ಮಂಟಪವಾಗಿ ನಿಂತಿರುತ್ತದೆ. ಆ ಪ್ರದರ್ಶನದ ಮುಂದೆ ಪೋಷಕರು ಸಾಲಾಗಿ ನಿಂತಿರುತ್ತಾರೆ. ಶಾಲೆ ಮಕ್ಕಳನ್ನು ಆರಿಸುವುದಕ್ಕಿಂತ ಮುಂಚೆ, ಪೋಷಕರೇ ತಮ್ಮ ಮಕ್ಕಳನ್ನು ಆ ಶಾಲೆಯ ಮುಂದೆ ತಂದು ನಿಲ್ಲಿಸುತ್ತಾರೆ.

ಯಾವ ಶಾಲೆಯಲ್ಲಿ ದುಬಾರಿ ಶುಲ್ಕ ಇದೆ? ಯಾವ ಶಾಲೆಯಲ್ಲಿ ಬಿಗಿಯಾಗಿ ಟೈ